ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 11 ಎಲ್‌ಜಿಪಿ 2018

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 29-01-2018.

PA
Circulate to all revenue staff on whatsapp
[signature] 29/1

## ಸುತ್ತೋಲೆ

ವಿಷಯ: ಕೃಷಿ ಭೂಮಿಯಲ್ಲಿ ನಿರ್ಮಿಸಿದ Farm House ಕುರಿತು ಮಾರ್ಗಸೂಚಿಗಳು.

* * *

ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95(1)ರ ಪರಂತುಕದಲ್ಲಿ ಕೃಷಿಕರು ಕೃಷಿ ಭೂಮಿಯ ಒಟ್ಟು ವಿಸ್ತೀರ್ಣದ ಶೇಕಡ 10 ರಷ್ಟು ಮೀರದ ಜಾಗದಲ್ಲಿ ಫಾರ್ಮ್‌ಹೌಸ್ ಕಟ್ಟಿಕೊಳ್ಳಬಹುದಾಗಿದೆ ಎಂದು ತಿಳಿಸಲಾಗಿದೆ. ಸದರಿ ಫಾರ್ಮ್ ಹೌಸ್‌ಅನ್ನು ಕೃಷಿಕರ ಹಾಗೂ ಅವರ ಕುಟುಂಬದ ವಾಸ್ತವ್ಯಕ್ಕಾಗಿ ಹಾಗೂ ಕೃಷಿ ಸಲಕರಣೆಗಳನ್ನು ಇಟ್ಟುಕೊಳ್ಳುವ ಸಲುವಾಗಿ ಮಾತ್ರ ಉಪಯೋಗಿಸತಕ್ಕದ್ದಾಗಿರುತ್ತದೆ. ಮುಂದುವರೆದು, ಸದರಿ ಫಾರ್ಮ್‌ಹೌಸ್ ಅನ್ನು ಬಾಡಿಗೆ ನೀಡಲಾಗಲೀ ಹಾಗೂ ಇತರೆ ವಾಣಿಜ್ಯ ಉದ್ದೇಶಕ್ಕಾಗಲೀ ಬಳಸಲು ಅವಕಾಶವಿರುವುದಿಲ್ಲ.

ಕೃಷಿಕರು ಕೃಷಿ ಭೂಮಿಯಲ್ಲಿನ ಫಾರ್ಮ್‌ಹೌಸ್ ಎಂದು ಪರಿಗಣಿಸುವ ಆಸ್ತಿಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಸೂಚನೆಗಳನ್ನು ಅನುಸರಿಸುವಂತೆ ಈ ಮೂಲಕ ತಿಳಿಸಲಾಗಿದೆ:-

1. ಆರ್.ಟಿ.ಸಿ ಯಂತೆ ಭೂಮಿಯ ಮಾಲೀಕರು ಹೊಂದಿರುವ ವ್ಯವಸಾಯ ಜಮೀನಿನ ಗರಿಷ್ಠ ಶೇ.10 ರಷ್ಟು ಜಮೀನಿನಲ್ಲಿ ('ಬಿ' ಖರಾಬು ಜಮೀನನ್ನು ಹೊರತುಪಡಿಸಿ) ಫಾರಂ ಹೌಸ್, ಭಾವಿ ಅಥವಾ ತೊಟ್ಟಿ ಇತ್ಯಾದಿಯನ್ನು ನಿರ್ಮಾಣ ಮಾಡಲು ಲಿಖಿತ ರೂಪದಲ್ಲಿ ತಮ್ಮ ಇಚ್ಛೆಯನ್ನು ಕಂದಾಯ ನಿರೀಕ್ಷಕರಿಗೆ ವ್ಯಕ್ತಪಡಿಸಬಹುದಾಗಿದೆ.

2. ಆರ್.ಟಿ.ಸಿಯಲ್ಲಿ ಭೂಮಾಲೀಕರ ಇಚ್ಛೆಯಂತೆ (ಸೂಚಿಸಲಾಗಿರುವ 10% ಮಿತಿಗೊಳಪಟ್ಟು) ಫಾರಂ ಹೌಸ್, ಭಾವಿ ಅಥವಾ ತೊಟ್ಟಿಯ ನಿರ್ಮಾಣದ ವಿವರವನ್ನು ಕಲಂ 11ರಲ್ಲಿ ನಮೂದಿಸಲು ಅನುವಾಗುವಂತೆ ಭೂಮಿ ತಂತ್ರಾಂಶದಲ್ಲಿ ಕಂದಾಯ ನಿರೀಕ್ಷಕರ ಲಾಗಿನ್‌ನಲ್ಲಿ ಹೊಸ ಸೇವೆಯನ್ನು ಸೇರಿಸಲಾಗುತ್ತಿದೆ.

3. ಈ ನಿರ್ಮಾಣವು ಸಂದರ್ಭೋಚಿತವಾಗಿದ್ದು, ಉತ್ತಮ ಸಾಗುವಳಿಗಾಗಿ ಅಥವಾ ವ್ಯವಸಾಯ ಉಪಯೋಗಕ್ಕಾಗಿದ್ದು, ತನ್ನದೇ ಆದ ಸ್ವತಂತ್ರ ಅಸ್ತಿತ್ವವನ್ನು ಹೊಂದಿರದ ಕಾರಣ ಮತ್ತು ಯಾವುದೇ ಪರಿವರ್ತನೆಯಾಗಿರದ ಕಾರಣ, ಈ ನಿರ್ಮಾಣಕ್ಕೆ ಪ್ರತ್ಯೇಕವಾದ ಗ್ರಾಮ ಪಂಚಾಯಿತಿ/ಮುನಿಸಿಪಾಲಿಟಿಯವರು ಆಸ್ತಿ ಸಂಖ್ಯೆಯನ್ನು ರಚಿಸತಕ್ಕದ್ದಲ್ಲ.

[signature] -2

Scanned by CamScanner

4. ಪ್ರಸ್ತಾಪಿತ ಫಾರ್ಮ್‌ಹೌಸ್ ಭಾಗದ ಆಸ್ತಿಯನ್ನು ಯಾವುದೇ ವ್ಯವಹಾರ ಅಥವಾ ಮಾರಾಟ ಮಾಡಬೇಕಾದ ಸಂದರ್ಭದಲ್ಲಿ ಅಥವಾ ಗ್ರಾಮ ಪಂಚಾಯಿತಿ/ಮುನಿಸಿಪಲ್ ಆಸ್ತಿ ಸಂಖ್ಯೆಯನ್ನು ನೀಡಬೇಕಾಗಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ನಿಯಮ 95ರಡಿ ಭೂ ಪರಿವರ್ತನೆಯು ಕಡ್ಡಾಯವಾಗಿರುತ್ತದೆ.

5. ಫಾರಂ ಹೌಸ್, ಬಾವಿ ಅಥವಾ ತೊಟ್ಟಿ ಇತ್ಯಾದಿ ನಿರ್ಮಾಣವು ಇತರೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟಿರುತ್ತದೆ.

6. ಮೇಲಿನ ಸೂಚನೆಗಳನ್ನು ಭೂಮಿ ತಂತ್ರಾಂಶದಲ್ಲಿ ಸೂಕ್ತ ರೀತಿಯಲ್ಲಿ ಅಳವಡಿಸುವಂತೆ ಸೂಚಿಸಲಾಗಿದೆ.

29.1.18
(ಎಸ್.ಎಲ್.ಮಹಾಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1).

ಇವರಿಗೆ:

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾಂ/ಕಲಬುರಗಿ ವಿಭಾಗ.
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
3. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ (ಜಿಲ್ಲಾಧಿಕಾರಿಗಳ ಮುಖಾಂತರ).
4. ಎಲ್ಲಾ ತಹಶೀಲ್ದಾರ್‌ರವರುಗಳಿಗೆ (ಜಿಲ್ಲಾಧಿಕಾರಿಗಳ ಮುಖಾಂತರ).
5. ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು:

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
3. ಸರ್ಕಾರದ ಅಪರ/ಉಪ/ಅಧೀನ ಕಾರ್ಯದರ್ಶಿ/ಪೀಠಾಧಿಕಾರಿಗಳು, ಕಂದಾಯ ಇಲಾಖೆ.

Scanned by CamScanner